ಅರಣ್ಯ ಚೆಕ್ ಪೋಸ್ಟ್‌ಗಳ ಸಂಖ್ಯೆ

52 - ಶ್ರೀ ಬಿ.ಎ. ಇದಿನಬ್ಬ (ಉಳ್ಳಾಲ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಚೆಕ್ ಪೋಸ್ಟ್‌ಗಳು ಎಷ್ಟು?

ಆ) ಪ್ರತಿ ಜಿಲ್ಲೆಯಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು? (ವಿವರ ನೀಡುವುದು)

ಇ) ಚೆಕ್ಪೋಸ್ಟ್ ಮೂಲಕ ಅರಣ್ಯ ಸಂಪತ್ತು ಕಳ್ಳಾಟಿಕೆಯಲ್ಲಿ ಗಡಿ ರಾಜ್ಯಗಳಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅಂತಹ ಎಷ್ಟು ಪ್ರಕರಣಗಳು ಸಿಕ್ಕಿವೆ ಮತ್ತು ಯಾವ ಯಾವ ಚೆಕ್ ಪೋಸ್‌ಗಳಲ್ಲಿ ಸಿಕ್ಕಿವೆ?

ಉ) ಅರಣ್ಯ ಸಂಪತ್ತನ್ನು ನಾಶ ಮಾಡುವ ಕಾಡುಗಳ್ಳರನ್ನು ಹಿಡಿಯಲು ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಊ) ಕಾಡುಗಳ್ಳರ ಜೊತೆಯಲ್ಲಿ ಅಧಿಕಾರಿಗಳು ಶಾಮೀಲು ಆಗದಂತೆ ಜಾಗ್ರತೆ ವಹಿಸಲಾಗಿದೆಯೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) 161

ಆ) ಜಿಲ್ಲಾವಾರು ವಿವರ ಕೆಳಗಿನಂತಿದೆ :

	ಜಿಲ್ಲೆಯ ಹೆಸರು	ಚೆಕ್ಪೋಸ್ಟ್‌ಗಳ ಸಂಖ್ಯೆ :
1)	ಕೊಡಗು	12
2)	ದಕ್ಷಿಣ ಕನ್ನಡ	18
3)	ಮೈಸೂರು	28
4)	ಹಾಸನ	8
5)	ಶಿವಮೊಗ್ಗ	26
6)	ಚಿಕ್ಕಮಗಳೂರು	8
7)	ಉತ್ತರ ಕನ್ನಡ	32
8)	ಧಾರವಾಡ	9
9)	ಬೆಳಗಾವಿ	7
10)	ವಿಜಾಪುರ	1
11)	ಬೆಂಗಳೂರು	8
12)	ಕೋಲಾರ	4
		161

(ಉಳಿದ ಜಿಲ್ಲೆಗಳಲ್ಲಿ ಅರಣ್ಯ ಚೆಕ್ ಪೋಸ್ಟ್ ಇರುವುದಿಲ್ಲ)

ಇ) ಹೌದು.

ಈ) ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು ಜಿ.ಐ (ಶ್ರೀಗಂಧ 36 ಇತರೇ 16)

ವೃತ್ತದ ಹೆಸರು	ಚೆಕ್ಪೋಸ್ಟ್ ಹೆಸರು	ದಾಖಲಾದ ಪ್ರಕರಣಗಳ ಸಂಖ್ಯೆ 1990-91	1991-92	1992-93	1993-94
ಕೊಡಗು	1) ಸಾತ್ತೂರು				
	2) ಕೊಟೆಕಾರ	1	1	3	-
	3) ಸಂಪಾಜೆ	1	1	-	-
	4) ಉಕ್ಕಡ	-	2	-	-

	5) ಮಾಕೂಟ	-	1	-	-
	6) ಭಾಗಮಂಡಲ	-	-	2	-
ಮೈಸೂರು	1) ಮೂಳೆ ಹೊಳೆ	-	-	3	-
ಬೆಂಗಳೂರು	1) ಅತ್ತೀಬೆಲೆ	-	-	14	15
	ಒಟ್ಟು	3	6	28	15::52

ಊ) 23 ಅರಣ್ಯ ಸಂಚಾರಿ ದಳಗಳನ್ನು ಸೃಜಿಸಿ, ಅವುಗಳಿಗೆ ನಿಸ್ತಂತು ಜೋಡಿಸಿದ ವಾಹನ ಒದಗಿಸಲಾಗಿದೆ. ಕಳ್ಳಸಾಗಣೆಕೆ ತಡೆಗಟ್ಟಲು ಕಟ್ಟನಿಟ್ಟಿನ ಕ್ರಮ ಕೈಗೊಳ್ಳಲು, ನಿರ್ದೇಶನ ನೀಡಲಾಗಿದೆ. ಸಿಬ್ಬಂದಿಗೆ ಆತ್ಮರಕ್ಷಣೆಗೆ ಬಂದೂಕು ಒದಗಿಸಲಾಗಿದೆ.

ಊ) ಹೌದು.

ಶ್ರೀ ಬಿ.ಕೆ. ಇದಿನಬ್ಬ: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯಲ್ಲಿ ಚೆಕ್ ಪೋಸ್ಟ್ ಮೂಲಕ ಅರಣ್ಯ ಸಂಪತ್ತು ಕಟ್ಟಾಟಿಕೆಯಲ್ಲಿ ಗಡಿ ರಾಜ್ಯಗಳಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದಕ್ಕೆ 'ಹೌದು' ಎಂದು ಉತ್ತರ ನೀಡಿದ್ದಾರೆ. ಅಂತಹ ಎಷ್ಟು ಪ್ರಕರಣಗಳು ಸಿಕ್ಕಿವೆ ಮತ್ತು ಯಾವ್ಯಾವ ಚೆಕ್ ಪೋಸ್ಟ್‌ಗಳಲ್ಲಿ ಸಿಕ್ಕಿವೆ ಎಂಬ ಪ್ರಶ್ನೆಗೆ ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 52, ಅದರಲ್ಲಿ ಶ್ರೀಗಂಧ 36 ಮತ್ತು ಇತರೇ 16 ಎಂದು ಉತ್ತರ ನೀಡಿದ್ದಾರೆ. ಬರೀ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ತೊಕ್ಕೋಟ್ ಮತ್ತು ವಿಟ್ಲವ ಉಕ್ಕಡದ ಎರಡೇ ಪ್ರದೇಶದಲ್ಲಿ ವರ್ಷಕ್ಕೆ 56 ಕೇಸುಗಳು ನಡೆಯುತ್ತಿರುತ್ತದೆ. ನಾಲ್ಕು ಲಾರಿಗಳನ್ನು ಚೆಕ್ ಪೋಸ್ಟ್‌ನಲ್ಲಿ, ಒಂದೊಂದು ಮಾತ್ರ ಹಿಡಿಯುತ್ತಾರೆ. ಇದು ಸಾಧಾರಣ ಮಾಮೂಲಿ ವಿಷಯ. ಆದ್ದರಿಂದ ನಮ್ಮ ಸರ್ಕಾರದ ಬೊಕ್ಕಸಕ್ಕೆ ಬಹಳ ದೊಡ್ಡ ಹಾನಿ ಆಗುತ್ತಾ ಇದೆ. ಇದನ್ನು ನಿಲ್ಲಿಸುವಂತಹ ಒಂದು ವ್ಯವಸ್ಥೆ ಮಾಡಬೇಕು. 23 ಅರಣ್ಯ ಸಂಚಾರಿ ದಳಗಳನ್ನು ರಚಿಸಿ ವಾಹನ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಅವು ಎಲ್ಲಿ ಸಂಚಾರ ಮಾಡುತ್ತವೆ, ಎಲ್ಲಿ ಹಿಡಿದಿದ್ದಾರೆ. ಆದ್ದರಿಂದ ಪ್ರತಿ ಒಂದು ವಾರಕ್ಕೆ ಮೂರ್ನಾಲ್ಕು ಗಂಧದ ಲೋಡ್ ಹೋಗುತ್ತಿದೆ, ವಿಟ್ಲದಲ್ಲಿ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಅರಣ್ಯ ಇಲಾಖೆಯವರು ಹಿಡಿಯುತ್ತಾರೆ ಎಂದಲ್ಲ. ಕಡೆಗೆ ಪೋಲೀಸನವರಾದರೂ ಯಾವಾಗಲಾದರೂ ಹಿಡಿಯುತ್ತಾರೆ ಅಷ್ಟೇ. ಇಂತಹ ಭಯಂಕರವಾದ ಸಾಗಾಟ ಕೇರಳಕ್ಕೆ ಹೋಗುವುದನ್ನು ನಿಲ್ಲಿಸುವುದಕ್ಕೆ ಉಗ್ರವಾದ ಕಾರ್ಯಕ್ರಮ ತಾವು ಏನು ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ.ಪಿ. ಕೇಶವಮೂರ್ತಿ: ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ 161 ಚೆಕ್ ಪೋಸ್ಟ್‌ಗಳು ಇವೆ. ಇದರಲ್ಲಿ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ನಾವು ಈಗಾಗಲೇ 52 ಕೇಸುಗಳನ್ನು ಹಿಡಿದಿದ್ದೇವೆ. ಮತ್ತು ಇದನ್ನು ಹಿಡಿಯಲಿಕ್ಕೆ ಸರ್ಕಾರದ ವತಿಯಿಂದ ಕೂಡ 242 ಲಕ್ಷ ರೂಪಾಯಿಗಳ ಒಂದು ಅಂದಾಜಿನ ಯೋಜನೆಯನ್ನು ಮಾಡಿ ಸರ್ಕಾರ ಮಂಜೂರಾತಿ ಮಾಡಿದೆ. ಅದಕ್ಕೆ ಈಗಾಗಲೇ ಬೇಕಾದಂತಹ ಸಿಬ್ಬಂದಿ 23 ಅರಣ್ಯ ಸಂಚಾರಿ ದಳದ ಜೊತೆಗೆ ಪೋಲೀಸ್ ಇಲಾಖೆಯಲ್ಲಿಯೂ ಸಹ ಅರಣ್ಯ ಸೆಲ್ ಎಂದು ಮಾಡಿ, ಐಜಿಪಿ ಲೆವೆಲ್ನಲ್ಲಿ, ಅವರೂ ಕೆಲಸ ಮಾಡುತ್ತಿದ್ದಾರೆ. ಮತ್ತು ಆ ಒಂದು ಸಿಬ್ಬಂದಿಗೆ ವೇಗವಾಗಿ ಚಲಿಸತಕ್ಕ ವಾಹನವನ್ನು ಮತ್ತು ವೈರ್‌ಲೆಸ್ ಸೆಟ್ ಇರತಕ್ಕ ವಾಹನಗಳನ್ನು ಕೊಟ್ಟಿದ್ದೇವೆ. ಕೆಲವು ಅರಣ್ಯ ಕಳ್ಳಸಾಗಾಣಿಕೆದಾರರೂ ಕೂಡ ನಮ್ಮ ಈ ಸಿಬ್ಬಂದಿಯ ಮೇಲೆ ಬಂದೂಕು ಇತ್ಯಾದಿ ಉಪಕರಣಗಳಿಂದ ಓಡಿಸಬಹುದು ಎಂದು ತಿಳಿದು ಅವರಿಗೂ ಕೂಡ ಬಂದೂಕು, ವಾಹನಗಳನ್ನು ಕೊಡಿಸಿಕೊಟ್ಟಿದ್ದೇವೆ. ಇತ್ತೀಚಿನ

ವರ್ಷಗಳಲ್ಲಿ ಗಂಧದ ಕಳ್ಳ ಸಾಗಾಣಿಕೆ ಸಾಕಷ್ಟು ಕಡಿಮೆ ಆಗಿದೆ. ಮೊದಲು ಅದು ಆಗುತ್ತಿತ್ತು. ಅದೇ ರೀತಿ ದಕ್ಷಿಣ ಕನ್ನಡ ಮತ್ತು ಕೂರ್ಗ್ ಭಾಗದಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ಕೂಡ ಸೇರಿಸಿ ಅವರಿಗೆ ಎಲ್ಲಾ ಸವಾಲತ್ತುಗಳನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಈಗಾಗಲೇ, ಒಂದು ಸೆಂಟ್ರಲ್ ಸ್ಟೇಕ್ ಫೋರ್ಸ್ ಎಂದು ಮಾಡಿ 9 ಸರ್ಕಲ್ ಸ್ಟೇಕ್ ಫೋರ್ಸ್‌ಗಳನ್ನು ಕೂಡ ಕೊಟ್ಟಿದ್ದೇವೆ. ಅವರಿಗೆ ವಾಹನಗಳು ಮತ್ತು ವೈರ್‌ಲೆಸ್ ಸೆಟ್ಟುಗಳನ್ನು ಅಳವಡಿಸಿಕೊಟ್ಟಿದ್ದೇವೆ. ಅವರ ಆತ್ಮರಕ್ಷಣೆಗಾಗಿ ಬಂದೂಕುಗಳನ್ನು ಕೂಡ ಕೊಟ್ಟಿದ್ದೇವೆ. ಅವರು ಹೆಚ್ಚಿನ ಶ್ರಮವಹಿಸಿ ಈ ಕಳ್ಳ ಸಾಗಾಣಿಕೆಯನ್ನು ತಡೆಯುವ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಬಿ.ಎಂ. ಇದಿನಬ್ಬ: ಕಾಡುಗಳ್ಳರ ಜೊತೆ ಅಧಿಕಾರಿಗಳು ಶಾಮೀಲಾಗದಂತೆ ಜಾಗ್ರತೆ ವಹಿಸಲಾಗಿದೆಯೆ? ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರಿಸಿದ್ದಾರೆ. ಒಬ್ಬ ಬ್ರಿಟಿಷ್ ತಜ್ಞ ಇಡೀ ಹಿಂದೂಸ್ತಾನವನ್ನು ಸುಮಾರು ಐವತ್ತು ವರ್ಷಗಳ ಕಾಲ ಬರೀ ಅರಣ್ಯ ಸಂಪತ್ತಿನಿಂದ ಆಳಬಹುದೆಂದು ತಿಳಿಸಿದ್ದಾನೆ. ಈ ಅರಣ್ಯ ಸಂಪತ್ತು ಕಾಡುಗಳ್ಳರ-ಅಧಿಕಾರಿಗಳ ಶಾಮೀಲಿನಿಂದಾಗಿ ಬರಿದಾಗುತ್ತಿದೆ. ತಾವು ಒಳ್ಳೆಯ ಕೆಲಸ ಮಾಡಿರುವುದಾಗಿ ತಿಳಿಸಿದ್ದೀರಿ, ಬಹಳ ಸಂತೋಷ. ಆದರೆ, ನೀವು ಏನೇ ಕ್ರಮ ಕೈಗೊಂಡರೂ ಅದನ್ನು ಅಧಿಕಾರಿಗಳು ಪಾಲಿಸಬೇಕಲ್ಲ! ಆದುದರಿಂದ, ತಾವು ಮಾರುವೇಷ ಹಾಕಿಕೊಂಡು ಚೆಕ್‌ಪೋಸ್ಟ್‌ಗಳು ಎಲ್ಲೆಲ್ಲಿವೆಯೋ ಅಲ್ಲಿಗೆ ಹೋಗಿ ತಿರುಗಾಡಿಕೊಂಡು ಬರಬೇಕು. ತಾವು ಮಂತ್ರಿಗಳಾಗಿ ಹೋದರೆ ಕೂಡಲೇ ಗೊತ್ತಾಗುತ್ತದೆ. ತಾವು ಹೇಳದೆ, ಕೇಳದೆ ಮಾರುವೇಷದಲ್ಲಿ ಅನಿರೀಕ್ಷಿತವಾಗಿ ಚೆಕ್‌ಪೋಸ್ಟ್‌ಗಳಿಗೆ ಹೋದರೆ ಅಲ್ಲಿ ಏನು ನಡೆಯುತ್ತಿದೆ ಎಂಬುದರ ಗುಟ್ಟು ತಮಗೆ ತಿಳಿಯುತ್ತದೆ. ಚೆಕ್‌ಪೋಸ್ಟ್‌ಗಳಲ್ಲಿ ನಡೆಯುವ ಅವ್ಯವಹಾರ, ಅಕ್ರಮಗಳಿಂದಾಗಿ ಕರ್ನಾಟಕ ರಾಜ್ಯದ ಅರಣ್ಯ ಸಂಪತ್ತು ನಷ್ಟವಾಗುತ್ತಿದೆ. ಅರಣ್ಯ ಸಂಪತ್ತೆಂದರೆ ಬಹಳ ಅದ್ಭುತವಾದುದು. ಅದರಲ್ಲಿ ಬೀಟೆ, ತೇಗ, ಗಂಧ, ಹೊನ್ನೆ ಮುಂತಾದ ಅಮೂಲ್ಯ ಮರಗಳಿರುತ್ತದೆ. ಈಗ ಅವೆಲ್ಲವೂ ಖಾಲಿಯಾಗಿವೆ. ಮರಗಳನ್ನು ಬೆಳೆಸುವುದಕ್ಕಾಗಿ ನಾವು ಕೋಟಿಗಟ್ಟಲೆ ಸಸಿಗಳನ್ನು ನೆಡುತ್ತೇವೆ. ನಮ್ಮ ಮಕ್ಕಳ ಕಾಲಕ್ಕೆ ಇವು ಬೆಳೆದು ದೊಡ್ಡದಾಗುತ್ತವೆ. ಈಗಿರುವ ಮರಗಳನ್ನು ನಾಶಪಡಿಸಿ ಗಿಡಗಳನ್ನು ನೆಡುವುದರಿಂದ ಏನು ಪ್ರಯೋಜನ? ಆದುದರಿಂದ, ತಾವು ಮಾರುವೇಷದಲ್ಲಿ ಚೆಕ್‌ಪೋಸ್ಟ್‌ಗಳಿಗೆ ಹೋಗಿ ಅಲ್ಲಿ ನಡೆಯುತ್ತಿರುವ ವ್ಯವಹಾರಗಳನ್ನು ತಿಳಿದುಕೊಂಡು ಬರುವ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ.ಪಿ. ಕೇಶವಮೂರ್ತಿ: ತಮ್ಮ ಸಲಹೆಯನ್ನು ನಾನು ಖಂಡಿತವಾಗಿ ಪರಿಪಾಲಿಸುತ್ತೇವೆ.

ಶ್ರೀ ಮಾಟಾಳ್ ನಾಗರಾಜ್: ಅಂದ ಮೇಲೆ ತಾವು ಯಾವ ವೇಷ ಹಾಕಿಕೊಂಡು ಹೋಗುತ್ತೀರಿ? ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪಿಕೊಂಡ ನಂತರ ಏನಾದರೂ ಒಂದು ವೇಷ ಹಾಕಬೇಕಲ್ಲ!

1994ರಲ್ಲಿ ಶಿಕ್ಷಕರುಗಳ ನೇಮಕಾತಿಗೆ ನಿಯಮ

300 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 1991ರ ನೇಮಕಾತಿಯಲ್ಲಿ ಅಂಕದ ಅರ್ಹತೆ ಆಧಾರದ ಮೇಲೆ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿದ್ದು ನಿಜವೇ;

ಆ. 1994ರ ನೇಮಕಾತಿಯಲ್ಲಿ ಯಾವ ನಿಯಮವನ್ನು ಅನುಸರಿಸಲಾಗುತ್ತದೆ.

ಇ. ನೇಮಕಾತಿಯ ವಯೋಮಿತಿ ಮೀರಿರುವ ನಿರುದ್ಯೋಗಿ (ಶಿಕ್ಷಕರ ತರಬೇತಿ ಪಡೆದವರು) ಭವಿಷ್ಯದ ಬಗ್ಗೆ ಸರ್ಕಾರ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದೆಯೇ